ಪ್ರತಿಬಿಂಬ

**PRATIBIMBA –Multidisciplinary Kannada Research Journal of IIMRD**
**ISSN: 2582-2284**
**Vol-5, Special Issue-1, Sep-Oct, 2023, Pp 7-16.**
**©IIMRD, Mysuru.**
**www.iimrd.com**

# ಕೋಲಾರ ಜಿಲ್ಲೆಯ ಪ್ರಮುಖ ಧಾರ್ಮಿಕ ಕೇಂದ್ರಗಳ ಸಾಂಸ್ಕೃತಿಕ ಬೆಳವಣಿಗೆ

**ಡಾ. ಶ್ರೀಕಾಂತ್ ಟಿ***

*ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮಾಲೂರು.

***ಸಾರಾಂಶ: (Abstract)***

*ಕೋಲಾರ ಜಿಲ್ಲೆಯ ಪ್ರಾಚೀನತೆಯನ್ನು ಪ್ರತಿಪಾದಿಸಲು ಹಲವಾರು ಐತಿಹ್ಯಗಳಿವೆ. ಕೋಲಾರವು ಕೋಲಹಲಪುರ, ಕೋಳಾಲ, ಕುವಲಾಲ, ಕೋಳಾಲ ಎಂಬ ಹೆಸರುಗಳಿಂದ ಕರೆಯಲ್ಪಡುತ್ತದೆ. ಅದಕ್ಕೆ ಜಮದಗ್ನಿ ಋಷಿ ಪರಶುರಾಮ ಕಾರ್ತವೀರ್ಯನ ಕಥೆಗಳ ಮೂಲಕ ಉಂಟಾಗುವ ಕೋಲಾಹಲ ಎಂಬ ಹೆಸರು ಬಂತೆಂದು ಹಾಗೂ ರೇಣುಕೆಯ ನೆನಪಿಗಾಗಿ ಇಲ್ಲಿನ ಕೋಲಾರಮ್ಮನ ದೇವಾಲಯವನ್ನು ಕಟ್ಟಲಾಯಿತು ಎಂದು ಐತಿಹ್ಯವಿದೆ. ಹಾಗೆ ಕೋಲ ಎಂಬ 'ಗೊಲ್ಲ' ನೇಗಿಲಿನಿಂದ ಭೂಮಿಯನ್ನು ಉಳುಮೆ ಮಾಡುತ್ತಿದ್ದ ಸಂದರ್ಭದಲ್ಲಿ ಸಿಕ್ಕಿದ್ದ ಹಣ ತಂದು ಕೊಡುವಂತೆ ಉತ್ತಮ ಚೋಳನನ್ನು ಒತ್ತಡ ಹಾಕಿದ ಸಂದರ್ಭದಲ್ಲಿ ರೇಣುಕಾದೇವಿ ಕೋಲಾಹಲ್ಲಮ್ಮನ ರೂಪದಲ್ಲಿ ಕಾಣಿಸಿಕೊಂಡು ಚೋಳ ರಾಜನಿಗೆ ಎಚ್ಚರಿಕೆ ಕೊಟ್ಟಿದ್ದರಿಂದ ಕೋಲಾರಮ್ಮನ ದೇವಾಲಯ ನಿರ್ಮಾಣವಾಯಿತು. ಮುಂದೆ ಅದೇ 'ಕೋಲಾರ' ಎಂಬ ಹೆಸರು ಬಂದಿತು. ನಾಲ್ಕನೇ ಶತಮಾನದ ಕಾಲದಲ್ಲಿ ಅಸ್ತಿತ್ವಕ್ಕೆ ಬಂದ ಕೋಲಾರ ಗಂಗರ ಅಧೀನದಲ್ಲಿತ್ತು ಹಾಗೂ ರಾಜಧಾನಿಯಾಗಿತ್ತು. ನಂತರ ಚೋಳರು, ಹೊಯ್ಸಳರು, ವಿಜಯನಗರದ ಅರಸರು ಮತ್ತು ಪಾಳೇಗಾರರ ಶಾಸನಗಳಲ್ಲಿ ಮಾಹಿತಿ ದೊರೆತಿದೆ.*

***ಮುಖ್ಯಪದಗಳು (Keywords)*** *ಧಾರ್ಮಿಕ ಕೇಂದ್ರ, ಸಾಂಸ್ಕೃತಿಕತೆ, ಅಂತರಗಂಗೆ, ಜಾತ್ರೆ–ಉತ್ಸವಗಳು.*

## ಪೀಠಿಕೆ

ಭೌಗೋಳಿಕವಾಗಿ **'ಕೋಲಾರ'** ಕರ್ನಾಟಕದ ದಕ್ಷಿಣ ಬಯಲು ಪೂರ್ವದಲ್ಲಿರುವ ಜಿಲ್ಲೆ. ಇದು ಪಶ್ಚಿಮದಲ್ಲಿ ಬೆಂಗಳೂರು ಗ್ರಾಮಾಂತರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗಳನ್ನು, ಉತ್ತರ ಮತ್ತು ಪೂರ್ವದಲ್ಲಿ ಆಂಧ್ರಪ್ರದೇಶ, ದಕ್ಷಿಣದಲ್ಲಿ ತಮಿಳುನಾಡು ರಾಜ್ಯಗಳನ್ನು ಒಳಗೊಂಡಿದೆ. ಕೋಲಾರ ತಾಲೂಕು 69.210 ಹೆಕ್ಟರ್ ಭೌಗೋಳಿಕ ವಿಸ್ತೀರ್ಣ, ಬಂಗಾರಪೇಟೆ ತಾಲೂಕು 74.520 ಭೌಗೋಳಿಕ ವಿಸ್ತೀರ್ಣ, ಮಾಲೂರು ತಾಲೂಕು 63116 ಎಕ್ಟೇರ್ ಭೌಗೋಳಿಕ ವಿಸ್ತೀರ್ಣ, ಮುಳಬಾಗಿಲು ತಾಲೂಕು 82.246 ಭೌಗೋಳಿಕ ವಿಸ್ತೀರ್ಣ, ಶ್ರೀನಿವಾಸಪುರ ತಾಲೂಕು 85.824 ಭೌಗೋಳಿಕ ವಿಸ್ತೀರ್ಣವನ್ನು ಒಳಗೊಂಡಿದ್ದು ಉಳಿದ ಕೆಜಿಎಫ್ ತಾಲೂಕು ಅತ್ಯಂತ ಕಡಿಮೆ ಭೌಗೋಳಿಕ ವಿಸ್ತೀರ್ಣವನ್ನು ಹೊಂದಿದೆ. ಇದು ಅನೇಕ ಬೆಟ್ಟಗುಡ್ಡ ಸಾಲುಗಳು, ತುಪ್ಪಗಳು ಇಳಿಜಾರು ಕಣಿವೆಗಳಿಂದ ಕೂಡಿದೆ. ಶತಶೃಂಗ ಪರ್ವತ ಶ್ರೇಣಿಗಳು ಹೊಂದಿಕೊಂಡಂತೆ ಸೀತೆ ಬೆಟ್ಟಸಾಲುಗಳು ಬ್ರಹ್ಮಗಿರಿ ಅಂದರೆ ಮಾರ್ಕಂಡಯ್ಯ, ಒಕ್ಕಲೇರಿ, ಕೂಡುಮಲ್ಯೆ

*Please cite this article as:* ಶ್ರೀಕಾಂತ್ ಟಿ. (2023). ಕೋಲಾರ ಜಿಲ್ಲೆಯ ಪ್ರಮುಖ ಧಾರ್ಮಿಕ ಕೇಂದ್ರಗಳ ಸಾಂಸ್ಕೃತಿಕ ಬೆಳವಣಿಗೆ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರಿಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 5(1). ಪು.ಸಂ. 7–16.*

ನಂಗಲಿವರೆಗೂ ವಿಸ್ತಾರಗೊಂಡಿರುವುದು ನರಸಾಪುರ ಬೆಟ್ಟ ಸಾಲುಗಳು ಅಂಜನಾದ್ರಿ ಬೆಟ್ಟಗಳು ಮುಳಬಾಗಿಲು ಹಾವಳಿ ವಾಲ್ಮೀಕಿ ಬೆಟ್ಟಗಳು ಬೂದಿಕೋಟೆ ಗುಡ್ಡಗಳು. ಈ ಜಿಲ್ಲೆಯು ಉತ್ತರ ಪಿನಾಕಿನಿ ಮತ್ತು ದಕ್ಷಿಣ ಪಿನಾಕಿನಿ ಜಲಾಯನ ಪ್ರದೇಶಗಳು ದಕ್ಷಿಣಕ್ಕೆ ಪ್ರದೇಶಗಳಿಗೆ ಬರುತ್ತದೆ. ಕುಶಾವತಿ ಜಿಲ್ಲೆಯ ಉಪನದಿಗಳಾದ ಮಾರ್ಕೊಂಡೊಳೆ ನಂಗಲಿಹೊಳೆ ಕೌಂಟಿಲ್ಯ ನದಿ ಪಾಪಾಘ್ನಿ ಉತ್ತರಪೆನ್ನ ಉಪನದಿಗಳಾಗಿ ಹರಿಯುತ್ತಿವೆ. ವೃಷಭಾವತಿ ದಕ್ಷಿಣ ಪಿನಾಕಿನಿ ಯಾವ ಉಪನದಿ ವಕಲೇರಿ ಬೆಟ್ಟದ ಪೂರ್ವದಲ್ಲಿ ಉಗಮಗೊಂಡು ಸುಲಿಕುಂಟೆ ಕೊಪ್ಪ ದೊಡ್ಡಕೆರೆ ಕಾಮಸಮುದ್ರದಿಂದ ತಮಿಳುನಾಡು ರಾಜ್ಯವನ್ನು ಸೇರುತ್ತದೆ. ಇಟ್ಕಲ್ ಬೆಟ್ಟದಲ್ಲಿ ಹುಟ್ಟಿ ಶ್ರೀನಿವಾಸಪುರ ತಾಲೂಕಿನಲ್ಲಿ ಹದಿನಾರು ಕಿಲೋಮೀಟರ್ ವರೆಗೆ ಹರಿಯುತ್ತದೆ. ಕೋಲಾರ ಮತ್ತು ಬಂಗಾರಪೇಟೆ ತಾಲೂಕುಗಳಲ್ಲಿ ಪಾಲಾರ್ ನದಿಗೆ ಅಡ್ಡಲಾಗಿ ಸೋಮಾಂಬುದಿ, ಜನಘಟ್ಟ, ಮುದುವಾಡಿ, ಚೆಲ್ಲಪಲ್ಲಿ, ಮಣಿಕಟ್ಟ, ಬೇತಮಂಗಲ, ರಾಮಸಾಗರಗಳ ಸರಣಿ ಕೆರೆಗಳು ಸೇರುತ್ತವೆ.

ಕೋಲಾರ ಜಿಲ್ಲೆಯು ಕೆರೆ ಬಾವಿಗಳು ನದಿಗಳು ಹೊಳೆಗಳನ್ನು ಹೊಂದಿದ್ದು ಸಸ್ಯವರ್ಗಗಳು ಅಭಿವೃದ್ಧಿಗೆ ಪೂರಕವಾಗಿವೆ. ಅನೇಕ ಬಗೆಯ ಕಾಡಿನ ಹಣ್ಣು–ಹಂಪಲುಗಳು, ತೋಟದ ಹಣ್ಣು ಹಂಪಲುಗಳು ಬೆಳೆಯುವಂತಹ ಪ್ರದೇಶ ಇದಾಗಿದೆ. ಬಾಣರು, ಗಂಗರು ತಮ್ಮ ರಾಜಧಾನಿಯಾಗಿ ಮಾಡಿಕೊಂಡು ಆಳ್ವಿಕೆ ನಡೆಸಿದರು. ಕಂಚಿಯ ಪಲ್ಲವರು, ಚೋಳರು, ಚೇರರು, ವಿಜಯನಗರ ಸಾಮ್ರಾಜ್ಯದ ವಿವಿಧ ಪಾಳ್ಯ ಪಟ್ಟುಗಳಾದ ಸುಗಟೂರಿನ ಪಾಳೇಗಾರರು, ಬಿಜಾಪುರದ ಆದಿಲ್ ಷಾಹಿಗಳು, ಮೊಘಲರ ಖಾಸಿಂ ಖಾನನು, ಮರಾಠರು, ಹೈದರಾಲಿ, ಟಿಪ್ಪು, ಇಂಗ್ಲೀಷರು, ಮೈಸೂರಿನ ಮುಮ್ಮಡಿ ಕೃಷ್ಣರಾಜ ಒಡೆಯರು, ಕಮಿಷನರುಗಳ ಆಳ್ವಿಕೆ, ಚಾಮರಾಜ ಒಡೆಯರು ಆಳ್ವಿಕೆ, ನಾಲ್ವಡಿ ಕೃಷ್ಣರಾಜ ಒಡೆಯರು ಮತ್ತು ದಿವಾನರುಗಳ ಕಾಲಘಟ್ಟಗಳಲ್ಲಿ ಆಳ್ವಿಕೆಗೆ ಒಳಪಟ್ಟಿತ್ತು. ಕೋಲಾರ ಜಿಲ್ಲೆ ಇತಿಹಾಸ ಪೂರ್ವ ಕಾಲದಿಂದಲೂ ಶಿಲಾಯುಗ ಮತ್ತು ಬೃಹತ್ ಶಿಲಾಯುಗ ಸಂಸ್ಕೃತಿಗಳ ನೆಲೆಬೀಡಾಗಿತ್ತು. ಹಾಗೆ ಕೆಲವು ಪ್ರಾಚೀನ ರಾಜವಂಶಗಳ ತವರೂರಾಗಿದೆ ಕೆಲವು ಸ್ಥಳಗಳು ಧಾರ್ಮಿಕ ಹಾಗೂ ಪೌರಾಣಿಕ ಮಹತ್ವವನ್ನು ಪಡೆದಿರಬಹುದು. ಹಾಗೆಯೇ ಕೆಲವು ಸ್ಥಳಗಳು ನೈಸರ್ಗಿಕ ತಾಣಗಳಾಗಿವೆ, ಇನ್ನೂ ಕೆಲವು ಪ್ರಾಚೀನ ದೇವಾಲಯಗಳಿಂದ ಅಥವಾ ವಾಸ್ತು ಶಿಲ್ಪ ಸಮೃದ್ಧತೆಯಿಂದ ಜನಪ್ರಿಯವಾಗಿದೆ. ಹಿಂದೂ ಧರ್ಮದವರಿಗೆ ಕೋಲಾರ ಜಿಲ್ಲೆ ಅನೇಕ ಪೌರಾಣಿಕ ಐತಿಹಾಸಿಕ ತಾಣಗಳಾಗಿ ಕಂಡುಬರುತ್ತದೆ. ಮಹಾಭಾರತದ ಕಾಲದ ಏಕಚಕ್ರ ಪುರಂದರ ಕೈವಾರದಲ್ಲಿ ಗಂಗ, ನೊಳಂಬರ ಕಾಲದ ಹಲವಾರು ದೇವಾಲಯಗಳು, ಆವಣಿ ಪವಿತ್ರ ಕ್ಷೇತ್ರವಾಗಿದ್ದು, ಭರತೇಶ್ವರ, ರಾಮಲಿಂಗೇಶ್ವರ, ಲಕ್ಷ್ಮಣೇಶ್ವರ, ಶತ್ರುಘ್ನೇಶ್ವರ ದೇವಾಲಯಗಳನ್ನು ಕಾಣಬಹುದು. ಅಲ್ಲದೆ ರಾಮಾಯಣದ ಘಟನೆಗಳು ಸಂಭವಿಸಿದ ಹಲವಾರು ಸ್ಥಳಗಳನ್ನು ಗುರುತಿಸಲಾಗಿದೆ. ಶ್ರೀಪಥೇಶ್ವರ, ಕಾಳಭೈರವ ದೇವಾಲಯ, ಸೀತೆ ಹಾಗೂ ಈ ಪರಿಸರದಲ್ಲಿ ಪ್ರಾಚೀನ ದೇವಾಲಯಗಳು ಜಿಲ್ಲೆಯಲ್ಲಿ ವಾಸಿಸುತ್ತಿರುವ ಹಲವರಿಗೆ ಅದರಲ್ಲೂ ಮೋರಸು ಒಕ್ಕಲಿಗರಿಗೆ ಪವಿತ್ರ ಯಾತ್ರಾ ಸ್ಥಳವಾಗಿದೆ.

ಕೋಲಾರ ಜಿಲ್ಲೆಯ ಗಡಿಭಾಗವಾಗಿರುವ ಮುಳಬಾಗಿಲು ಮತ್ತು ನರಸಿಂಹತೀರ್ಥ ಯಾತ್ರಿಕರಿಗೆ ಪವಿತ್ರ ಯಾತ್ರ ಸ್ಥಳವಾಗಿದೆ. ಕೋಲಾರ ಜಿಲ್ಲೆಯಲ್ಲಿ ಬೌದ್ಧ ಹಾಗೂ ಜೈನ ಅವಶೇಷಗಳು ಅತಿ ವಿರಳವಾಗಿದ್ದು ನಾಶಗೊಂಡಿವೆ, ಶ್ರೀನಿವಾಸಪುರ ತಾಲೂಕಿನ ಅರಣಕುಂಟೆ ಗ್ರಾಮದ ಹೊರ ವಲಯದಲ್ಲಿ

ಎರಡು ಬೌದ್ಧ ವಿಹಾರಗಳು ಕ್ರಿ.ಶ ಒಂದು ಮತ್ತು ಎರಡನೇ ಶತಮಾನದಲ್ಲಿ ಶಾತವಾಹನರ ಆಳ್ವಿಕೆ ಅವಧಿಯಲ್ಲಿ ನಿರ್ಮಾಣವಾಗಿದೆ ಎಂದು ತಜ್ಞರು ಅಭಿಪ್ರಾಯ ಪಡುತ್ತಾರೆ. ಆವನಿಯಲ್ಲಿ ಬೌದ್ಧವಿಹಾರ ಇದೆ ಎಂದು ಕಂಡುಬಂದಿದೆ ಹಾಗೆ ಮುಳಬಾಗಿಲು ತಾಲೂಕಿನ ಕುರುಡು ಮಲೆ ಗ್ರಾಮದಲ್ಲಿ ಆರ್.ನರಸಿಂಹಾಚಾರ್ಯರು ತಮ್ಮ ವರದಿ ಮಾಡಿದ್ದರು. ಶಾತವಾಹನರ ಕಾಲದ ಸುಟ್ಟ ಇಟ್ಟಿಗೆ, ಮಡಿಕೆ–ಕುಡಿಕೆಗಳ ಚೂರುಗಳು ಮತ್ತು ಕಬ್ಬಿಣದ ಕುಲವಂಥ ಅವಶೇಷಗಳು ಪತ್ತೆಯಾಗಿವೆ. ಮಲಪಾಗಿ ತಾಲೂಕಿನ ಹುಡುಗಿನೂರು ಗ್ರಾಮದ ತಾಮ್ರಶಾಸನದಲ್ಲಿ ಬಾಣವಂಶದ ಅರಸ ನಂದಿವರ್ಮ ಬುದ್ಧನಂತೆ ಕರುಣಾಮಯಿ ಎಂದು ಗುರುತಿಸುತ್ತದೆ. ಹಾಗೆ ಮಾಲೂರು ತಾಲೂಕಿನ ನಳಮಂಗಲದ ತಾಮ್ರ ಶಾಸನದಲ್ಲಿ ಗಂಗರ ದೊರೆ ಅವನು ಹೊರನೂರಿನ ಜೈನಬಸದಿಗೆ ಕೋರಿಕೊಂಡ ವಿಷಯದ ಚನ್ನಲಕರಿಕನಿ ಗ್ರಾಮವನ್ನು ಮೂಲ ಸಂಘದ ಚಂದ್ರನಂತಿ ಆಚಾರ್ಯರಿಗೆ ದಾನವಾಗಿ ಕೊಟ್ಟ ಗುರು ರವಿಕೀರ್ತಿಯನ್ನು ಉಪದೇಶಿಸಿದಂತೆ ಚೆನ್ನಿ ಹಾಡಿಗಳ್ ಎಂಬ ಅಧಿಕಾರಿಯು ನಿರ್ಮಿಸಿದ ಜೈನಬಸದಿಗೆ ಹಲವು ಕಶ್ಯಪನಗಳನ್ನು ದೇವಬೋಗವಾಗಿ ದಾನ ನೀಡಿದ ವಿವರಗಳಿವೆ. ಕೋಲಾರ ತಾಲೂಕಿನ ನರಸಾಪುರ ತಾಮ್ರಶಾಸನದಲ್ಲಿ ತೇನೊಂದ ಕೈಯಾಳ ಎಂಬ ಅಧಿಕಾರಿಯು ಕಣ್ಣಮಂಗಳ ಗ್ರಾಮದಲ್ಲಿ ಒಂದು ಜೈನಬಸದಿಯನ್ನು ನಿರ್ಮಿಸಿ ಉತ್ತರ ನಂದಿ ಪುರಿ ಮಂಡಲದ ಭಟ್ಟಾರ ಶಿಷ್ಯ ಹಾಗೂ ಕಮಂಗರಿಯ ಕಡೆಗೂ ಭಟ್ಟರ ಶಿಷ್ಯರಾದ ಕಮಲಿ ಅವರಿಗೆ ನೀಡಿದ ಹಲವು ಭೂತಾನಗಳ ವಿವರಗಳಿವೆ.

ಪುರಾಣ ಪುರುಷರ ಕಥೆಗಳಲ್ಲಿ ಕೋಲದೇವಿಯ ಬಗ್ಗೆ ಮಾಹಿತಿ ಇದೆ ಹಾಗೆ ಮುಳಬಾಗಿಲಿನ ಆಂಜನೇಯಸ್ವಾಮಿ ದೇವಾಲಯ, ನರಸಿಂಹತೀರ್ಥ, ವಿಜಯವಿಠ್ಠಲಸ್ವಾಮಿ ದೇವಾಲಯ, ಸೋಮೇಶ್ವರ ದೇವಾಲಯ, ಗಟ್ಟಿ ವೆಂಕಟರಮಣಸ್ವಾಮಿ ದೇವಾಲಯ, ವಿರೂಪಾಕ್ಷಿ ಆವಣಿ, ಬಂಗಾರ ತಿರುಪತಿ, ಕೋಟಿ ಲಿಂಗ, ಕೆಜಿಎಫ್‌ನ ಚರ್ಚಿಗಳು ಬಂಗಾರಪೇಟೆ ಕೋದಂಡರಾಮಸ್ವಾಮಿ ದೇವಾಲಯ, ಟೇಕಲ್ಲಿನ ವರದರಾಜಸ್ವಾಮಿ ದೇವಾಲಯ, ಬನಹಳ್ಳಿಯ ಪ್ರಾಚೀನ ಕಾಲದ ಶಿಲಾಯುಗಕ್ಕೆ ಸಂಬಂಧಪಟ್ಟಂತಹ ಅವಶೇಷಗಳು ಅಲ್ಲೇ ಇರುವಂತಹ ಮುನೇಶ್ವರ ದೇವಾಲಯ ಚಿಕ್ಕತಿರುಪತಿಯ ಪ್ರಸನ್ನ ವೆಂಕಟರಮಣ ದೇವಾಲಯ, ಬೇತಮಂಗಲದ ವಿಜಯೇಂದ್ರ ದೇವಾಲಯ, ಕರಗದ ಗುಡಿಗಳು ಸೀತೆಯ ಭೈರವೇಶ್ವರ ದೇವಾಲಯ, ಕೋಲಾರದ ಸೋಮೇಶ್ವರ ದೇವಾಲಯ, ಕೋಲಾರಮ್ಮ ದೇವಾಲಯ, ಆಂಜನೇಯಸ್ವಾಮಿ ದೇವಾಲಯ, ಅಂತರಗಂಗೆ ಬೆಟ್ಟದಲ್ಲಿರುವ ಸೋಮನಾಥೇಶ್ವರ ದೇವಾಲಯ, ಕೋಲಾರದ ವಿವಿಧ ಮಸೀದಿ ಮತ್ತು ದರ್ಗಾಗಳು ಮುಳಬಾಗಿಲಿನ ಹೈದರ್ ಕಾವಲಿ, ದರ್ಗಾ ಇವೆಲ್ಲಾ ಕೋಲಾರ ಜಿಲ್ಲೆಯ ಪ್ರಮುಖ ಧಾರ್ಮಿಕ ಕೇಂದ್ರಗಳಲ್ಲಿ ಒಂದಾಗಿದೆ.

**ಆವಣಿ**

ಆವಣಿ ಮುಳಬಾಗಿಲು ನಿಂದ 12 ಕಿಲೋಮೀಟರ್ ದೂರದಲ್ಲಿರುವ ಪ್ರಾಚೀನ ಜನಪ್ರಿಯ ಧಾರ್ಮಿಕ ಕ್ಷೇತ್ರವಾಗಿದೆ. ಇದನ್ನಾವಂತಿಕ ಕ್ಷೇತ್ರ ಎಂದು ಪರಿಗಣಿಸಲಾಗಿದೆ ಕೆಲವು ಶಿಲಾಶಾಸನಗಳಲ್ಲಿ ಆವನೆಯ ಸ್ಥಾನ, ಅವನೇ ಸ್ಥಾನ ಉಲ್ಲೇಖವಿದೆ. ಹಿಂದೆ ತ್ರಿಬವನ ಕಾರ್ತಾರ ದೇವನು ಆಳ್ವಿಕೆಯನ್ನು ಮಾಡುತ್ತಿದ್ದ ವಿಚಾರದ ದಾಖಲೆಯಿದೆ. ಗಂಗ, ಪಲ್ಲವ, ಚಾಲುಕ್ಯ, ಚೋಳ, ಹೊಯ್ಸಳ, ವಿಜಯನಗರ ಕಾಲದಲ್ಲಿ ಹಲವಾರು ದೇವಾಲಯಗಳ ನಿರ್ಮಾಣ ವಾಸ್ತುಶಿಲ್ಪದ ಬಗ್ಗೆ ಮಾಹಿತಿ ಇದೆ. ಪ್ರಾಚೀನ

ಶಾಸನವೊಂದರ ಪ್ರಕಾರ ಲಕ್ಷ್ಮೀಶ್ವರ, ಭರತೇಶ್ವರ ಮತ್ತು ಶತ್ರುಘ್ನೇಶ್ವರ ಹನುಮಂತರ ಸೀತಾದೇವಿಯ ಗುಡಿಗಳ ಅಧಿಷ್ಠಾನದ ಮೇಲಿರುವ ಶಿಲಾ ಶಾಸನಗಳಲ್ಲಿ ಗಂಗರಾಜನಿಗೆ ಇದ್ದ ಪೃಥ್ವಿ ಗಂಗಾ ಬಿರುದನ್ನು ಉಲ್ಲೇಖಿಸುತ್ತದೆ. ಅಂದರೆ ಗಂಗವಂಶಿಯ ಕಾಲದಲ್ಲಿ ಮತ್ತು ಬೀರನೊಳಂಬ ದೇವಲಬ್ಬಡರಿಸಿ ಈ ದೇವಾಲಯಗಳ ಅಧಿಸ್ಥಾನಗಳು ಮತ್ತು ಮಾನಸ್ಥಂಭಗಳು ರಚನೆಯಾದವು ಎಂಬ ಉಲ್ಲೇಖಗಳು ಹೊಂದಿವೆ. ಬೆಟ್ಟದ ಮೇಲೆ ರಾಮಾಯಣ ಕಾಲದ ಹಲವಾರು ಕುರುಹುಗಳು ಕಂಡು ಬಂದಿವೆ. ರಾಮಾಯಣದಲ್ಲಿ ಬರುವ ಸೀತೆಯ ಜೀವನದ ಘಟನೆಗಳು, ಅವನು ಬೆಟ್ಟದ ಮೇಲೆ ಜೀರಿಗೆ ಎಂಬ ಗಾಢವಾದ ಸ್ಥಳೀಯ ನಂಬಿಕೆ ಇದೆ. ದೇವಾಂಬಿಕೆ ಎಂಬ ನಾಳು ಮರಾಣಿಯು ತನ್ನ ಜೇಷ್ಠ ಪುತ್ರ ವೀರಮಹೇಂದ್ರ ನೊಳಂಬ ರಾಜನು ಯುದ್ಧದಲ್ಲಿ ಮಡಿದ ಜ್ಞಾಪಕಾರ್ಥವಾಗಿ ಆವಣಿಯಲ್ಲಿ ರಾಮೇಶ್ವರ ದೇವಾಲಯವನ್ನು ನಿರ್ಮಿಸಿದಳೆಂದು ವ್ಯಕ್ತವಾಗುತ್ತದೆ ಹಾಗೆ ಅಧಿಕಾರ ವಹಿಸಿಕೊಂಡ ಮೇಲೆ ಆ ಬೆಟ್ಟಕ್ಕೆ 200 ಮೆಟ್ಟಲುಗಳನ್ನು ನಿರ್ಮಿಸಿರುವ ಮೆಟ್ಟಿಲು ಬಂಡೆ ನೆಕ್ಸ್ತೊಟ್ಟಿಲು ಬಂಡೆ ಹಾಗೂ ಎತ್ತರವಾದ ಬಂಡೆಗಳ ಮೇಲೆ ಸೀತಾದೇವಿ ನಿಂತು ಅರ್ಧಮೈಲಿ ದೂರದಲ್ಲಿದ್ದರೂ ಬೆಟ್ಟದ ಮೇಲೆ ತನ್ನ ಮಕ್ಕಳಾದ ಲವಕುಶರು ಹೋರಾಟವನ್ನು ವೀಕ್ಷಿಸಿದ ಎಂದು ಪ್ರತೀತಿ ಇದೆ. ಹಾಗೆ ಗಂಜಿಗುಂಟೆಯ ಬಳಿ ಇದ್ದ ಇನ್ನೊಂದು ಬಂಡೆಯ ಮೇಲೆ ಶ್ರೀರಾಮನು ನಿಂತು ಆ ಬಂಡೆಯನ್ನು ರಾಮಬಂಡೆ ಎಂದು ಕರೆಯುತ್ತಾರೆ. ಇದರ ಪಕ್ಕದಲ್ಲಿ ವಾಲ್ಮೀಕಿ ಗವಿ ಇದೆ ಹಾಗೂ ಅಲ್ಲಿ ಹಲವು ಉಬ್ಬುಶಿಲ್ಪಗಳು ಇರುವುದು ಕಂಡು ಬಂದಿದೆ. ಚೋಳರ ಕಾಲದ ಪ್ರಾಚೀನ ಐದು ಶಿವಲಿಂಗಗಳನ್ನು ಪ್ರತಿಷ್ಠಾಪಿಸಲಾಗಿತ್ತು. ಇದು ಪಂಚ ಪಾಂಡವರ ನೆನಪಿಗೆ ನಿರ್ಮಿಸಲಾಗಿದೆ ಎಂದು ಪ್ರತೀತಿ ಇದೆ ಹಾಗೂ ಸೀತಾದೇವಿ ತನ್ನ ಬಟ್ಟೆಗಳನ್ನು ತೊಳೆದ ಎಂದು ಹೇಳಲಾಗುವ ಕಷಾಯ ತೀರ್ಥ ಎಂಬ ಚಿಕ್ಕ ಕಲ್ಯಾಣಿಯೂ ಕೂಡಾ ಇದೆ ಹಾಗೂ ಲವಕುಶರ ಗುಡಿಗಳು ಕೂಡ ಇವೆ. ಅದೇ ರೀತಿ ರಾಮಾಯಣದ ಧನುಷ್‌ಕೊಟಿ ಇದೆ. ಲಾವಣ್ಯ ನಾಡು 30 ಎಂಬ ಪ್ರದೇಶವು ಬಾಣರಸರ ಕಾಲದಿಂದಲೂ ತಮ್ಮ ಹಿರಮಿಗೆ ಪಾತ್ರವಾಗಿದ್ದು ನೊಳಂಬರ ಅರಸಿಯಾದ ಕದಂಬ ಕನ್ಯೆ ಪ್ರೇರಣೆಯನ್ನು ದೇವಾಲಯ ನಿರ್ಮಾಣದಲ್ಲಿ ಗಮನಿಸಬಹುದು. ಈ ದೇವಾಲಯಗಳು ಉನ್ನತಿಗೇರಿದವು ಹೊಯ್ಸಳ ರಾಮನಾಥನ ಕಾಲದಲ್ಲಿ ಇದರ ಉತ್ಕರ್ಷವನ್ನು ಇಲ್ಲಿ ಕಾಣಬಹುದು. ವಿಜಯನಗರ ಅರಸರು ಇದನ್ನು ವಿಸ್ತರಿಸಿದರೆ ಪಾಳೇಗಾರರು ಅಗತ್ಯವಾದ ಗೋಪುರಗಳನ್ನು ನಿರ್ಮಿಸಿದರು. ಮಹಾಶಿವರಾತ್ರಿಯ ಮಾರನೇ ದಿವಸದಂದು ಬ್ರಹ್ಮ ಮಹೋತ್ಸವ 15 ದಿನಗಳ ಕಾಲ ಇಲ್ಲಿ ನಡೆಯುವ ದನಗಳ ಜಾತ್ರೆ ಇದಕ್ಕೆ ಸಾಕ್ಷಿಯಾಗಿದೆ.

**ವಿರೂಪಾಕ್ಷಿ**

ವಿರೂಪಾಕ್ಷಿ ಇದು ಮುಳಬಾಗಿಲಿಂದ 3 ಕಿಲೋಮೀಟರ್ ದೂರದಲ್ಲಿದೆ. ವಿಜಯನಗರದ ಮುಳುಬಾಯಿ ರಾಜ್ಯದ ಹಂಪಿಯ ವೈಭವ ಮರುಕಳಿಸುವ ಈ ದೇವಾಲಯ ಇಲ್ಲಿ ದಂಡನಾಯಕ ಲಕ್ಕಣ್ಣ ಮತ್ತು ಮಾದನರು ವಿರೂಪಾಕ್ಷಿಯ ಭವ್ಯವಾದ ದೇವಾಲಯವನ್ನು ಕಟ್ಟಿಸಿರುತ್ತಾರೆ. ಇಂದು ಗೋಪುರದ ತಳಪಾಯಗಳು, ಮುರಿದ ಮಂಟಪಗಳು, ಶಿವಾಲಯ ಅದರಲ್ಲಿ ಶಿವಲಿಂಗವು ಪುಟ್ಟದಾಗಿದ್ದು ಆತ್ಮಲಿಂಗ ಅಥವಾ ತೇಜೋಲಿಂಗಗಳನ್ನು ನೆನಪಿಸುತ್ತದೆ. ಬೆಳಿಗ್ಗೆ ಮಧುವಿನ ಬಣ್ಣದಂತೆ ಕಂಗೊಳಿಸುವ ವಿರೂಪಾಕ್ಷೇಶ್ವರನು ಸೂರ್ಯನ ಹೊಂಗಿರಣಗಳು ಬಿದ್ದು ರೋಮಾಂಚನವನ್ನುಂಟು ಮಾಡುತ್ತದೆ. ಹಾಗೆ

ಮಧ್ಯಾಹ್ನ ಮತ್ತೊಂದು ವರ್ಣ, ಸಂಜೆ ಮತ್ತೊಂದು ವರ್ಣ ಕಂಡುಬರುತ್ತದೆ ಹಾಗೂ ದುರ್ಗ ದೇವಾಲಯಗಳನ್ನು ಕಾಣಬಹುದು. ವಿರೂಪಾಕ್ಷಿ ದೇವಾಲಯವು ಒಬ್ಬ ವ್ಯಕ್ತಿಯ ಶ್ರದ್ಧೆ, ಭಕ್ತಿಗಳ ಸಕಾರ ರೂಪವಾಗಿದೆ. ಇತಿಹಾಸ ಶಿಲ್ಪ ಕಲೆಗಳು ಸಹ ಇಲ್ಲಿ ಜನಜನಿತವಾಗಿದೆ. ಶಿವರಾತ್ರಿ, ಕಾರ್ತಿಕ ಮಾಸಗಳಲ್ಲಿ ವಿಶೇಷ ಪೂಜೆಗಳನ್ನು ಸಲ್ಲಿಸಲಾಗುತ್ತದೆ. ರಥಸಪ್ತಮಿಯಂದು ಬ್ರಹ್ಮ ಮಹೋತ್ಸವ ನಡೆಯುತ್ತದೆ.

**ಕುರುಡುಮಲೆ**

ಕುರುಡುಮಲೆ ವಿನಾಯಕನ ಆರಾಧನೆಗೆ ಹೆಸರಾಗಿರುವ ಈ ಗ್ರಾಮವು ಮುಳಬಾಗಿಲಿನಿಂದ 10 ಕಿ.ಮೀ. ದೂರದಲ್ಲಿದೆ. ಬೆಟ್ಟ ಗುಡ್ಡಗಳಿಂದ ಕೂಡಿರುವ ನೈಸರ್ಗಿಕ ವಾತಾವರಣವನ್ನು ಉಂಟು ಮಾಡಿರುವ ಈ ಸ್ಥಳ ವಹಿಸಲಾರ ಮತ್ತು ಅದಕ್ಕೂ ಹಿಂದಿನ ಕಾಲದ ಸ್ಮಾರಕಗಳಿವೆ ಎಂದು ಹೆಸರಿದೆ. ಈ ತಪ್ಪಲಿನಲ್ಲಿ ಮಹಾಗಣಪತಿ ಹೊಯ್ಸಳರ, ವಿಜಯನಗರ ಅರಸರ ಕಾಲದ ಶೈಲಿಗೆ ಹೋಲುತ್ತದೆ. ಈ ಆಲಯದ ಕಂಬಗಳು ದೊಡ್ಡ ಗಾತ್ರದಾಗಿದ್ದು, ಸುಂದರವಾದ ಕೆತ್ತನೆಗಳನ್ನು ಹೊಂದಿವೆ. ವೃತ್ತಕ್ಕೆ ಸಂಬಂಧಿಸಿದ ಕಸೂತಿ ಕಲೆಯಿಂದ ಆವೃತವಾಗಿದೆ. ಅತ್ಯಂತ ದೊಡ್ಡ ವಿಗ್ರಹವಾಗಿದ್ದು ಶುಭ ಪುರಾಣ ರಾಮಾಯಣದ ಕೆತ್ತನೆಗಳಲ್ಲಿ ಇರುವಂತೆ ವಿಜಯನಗರ ಶೈಲಿಯೂ, ಕೆಲವು ಸಾಮಾನ್ಯ ಅಂಡಾಕಾರದ ಪೀಠದ ಮೇಲೆ ಕುಳಿತಿರುವ ವಿನಾಯಕನ ರೂಪವು ಎಂಥವರಲ್ಲಿಯೂ ಭಕ್ತಿಯನ್ನು ಮೂಡಿಸುತ್ತದೆ. ಸುಮಾರು 830 ಅಡಿ ಎತ್ತರವಿರುವ ಮೂಲಮೂರ್ತಿ ಮೇಲೆ ಚತುಸ್ಕಾರ ಮತ್ತು ಅಂಡಾಕಾರದ ಪೀಠದ ಮೇಲೆ ಸ್ಥಾಪಿಸಿರುತ್ತಾರೆ. ದೇವರಿಗೆ ಎದುರಾಗಿರುವ ಕಂಬಗಳ ಮೇಲು ಸಹ ಕೆಲವೊಂದು ಕೆತ್ತನೆಗಳು ಕಂಡುಬರುತ್ತವೆ. ಈ ದೇವರಿಗೆ ಎದುರಾಗಿ ಮೂಷಿಕ ಕಲ್ಲಿನಲ್ಲಿ ನೋಡುತ್ತಾನೆ. ಹೊಯ್ಸಳರ ಸ್ಥಳೀಯ ರಾಜಧಾನಿಯಾಗಿ ಪ್ರಸಿದ್ಧವಾದ ಕುರುಡುಮಲೆ ಕೂತಾನೇಶ್ವರ ದೇವಾಲಯವು ಎತ್ತರವಾದ ಸ್ಥಳದಲ್ಲಿದೆ. ಉತ್ತಮವಾದ ಗೋಪುರದೊಂದಿಗೆ ಕರಿಕಲ್ಲಿನಲ್ಲಿ ನಿರ್ಮಾಣವಾಗಿರುವ ಈ ಆಲಯದ ಮುಂದೆ ನಾದಗಣಪತಿ ವಿಗ್ರಹವಿದೆ. ಶೈವ, ವೈಷ್ಣವ ಧರ್ಮಗಳಿಗೆ ಸಂಬಂಧಿಸಿದ ಹಲವಾರು ಶಿಲ್ಪಗಳ ವಿಗ್ರಹಗಳಿರುವುದು ಕಂಡುಬಂದಿದೆ. ಗಂಗ, ಚೋಳ ವಂಶದ ಎಲೆವನ್ನಿರಾಯನೆಂಬ ವ್ಯಕ್ತಿ ಈ ದೇವಾಲಯದ ಕಾಂತೀಯಗಳನ್ನು ನೋಡಿಕೊಳ್ಳಲು ದಾನದತ್ತಿಗಳನ್ನು ನೀಡಿದ್ದನು. ತಂತ್ರ ಪಾಲನೆಂಬ ವ್ಯಕ್ತಿಯು ಸೌಂದರ್ಯವನ್ನು ಹೆಚ್ಚಿಸಲು ಕೊಳಗಳನ್ನು, ಕೆರೆಗಳನ್ನು ನಿರ್ಮಿಸಿದನೆಂದು ತಿಳಿದು ಬರುತ್ತದೆ ಹಾಗೂ ಈತನ ಕಾಲದಲ್ಲಿ ಎರಡು ದೇವಾಲಯಗಳು ನವೀಕರಣಗೊಂಡಿವೆ. ಭಾದ್ರಪದ ಶುಕ್ಲ ಚೌತಿಯಂದು ಆರಂಭಗೊಳ್ಳುವ ಕುರುಡುಮಲೆಯಲ್ಲಿ ವಿನಾಯಕನ ಜಾತ್ರಾ ಮಹೋತ್ಸವಗಳು ಸುಮಾರು ಎರಡು–ಮೂರು ದಿನಗಳ ಕಾಲ ನಡೆಯುತ್ತದೆ.

**ಚಿಕ್ಕ ತಿರುಪತಿ**

ಚಿಕ್ಕ ತಿರುಪತಿ ಮಾಲೂರು ತಾಲೂಕಿನ ಪ್ರಸಿದ್ಧ ಯಾತ್ರಾ ಸ್ಥಳವಾಗಿದೆ. ಇದನ್ನು ಕಲ್ಕೇರಿ ತಿರುಪತಿ ಎಂಬ ಮತ್ತೊಂದು ಹೆಸರಿನಿಂದ ಕರೆಯುತ್ತಾರೆ. ಪ್ರಸನ್ನ ವೆಂಕಟ ಶ್ರೀನಿವಾಸನ ನೆಲೆಯಾಗಿರುವ ಈ ಪುಣ್ಯಕ್ಷೇತ್ರ ತಮಿಳುನಾಡಿಗೆ ಸಮೀಪವಾಗಿದೆ. ಆಂಧ್ರಪ್ರದೇಶದಿಂದ ಮತ್ತು ತಮಿಳುನಾಡಿನಿಂದ ತಮ್ಮ ಹರಕೆ ಸಲ್ಲಿಸಲು ಭಕ್ತಾದಿಗಳು ಸಾಲು ಸಾಲಾಗಿ ಬಂದು ಹರಕೆಯನ್ನು ತೀರಿಸುತ್ತಾರೆ. ಈ ಚಿಕ್ಕ ತಿರುಪತಿಗೆ ಪೌರಾಣಿಕ ಹಿನ್ನೆಲೆಯಿದ್ದು ಇದು ಜನಮೆ ಜಯರಾಯನು ಯಾಗ ಮಾಡಿದ ಸ್ಥಳವಾಗಿದೆ. ದೇವಾಲಯದ ರಚನೆ ಪಾಳೇಗಾರರ ಕಾಲಕ್ಕೆ ಸೇರುತ್ತದೆ. ನವರಂಗ, ಸುಖನಾಸಿ, ಗರ್ಭಗೃಹಗಳನ್ನು ಈ ದೇವಾಲಯ

ಹೊಂದಿರುತ್ತದೆ. ಸುತ್ತಲೂ ಕೆಲವು ಮಂಟಪಗಳನ್ನು ನಿರ್ಮಿಸಿರುತ್ತಾರೆ. ಗರ್ಭಗೃಹವು ಶಿಥಿಲವಾದ ಕಾರಣ ಪ್ರಾಚ್ಯ ಇಲಾಖೆಯವರು ಆಸರೆ ಕೋಡಿಗಳನ್ನು ಕಟ್ಟಿ ರಕ್ಷಿಸಲು ಪ್ರಸನ್ನ ವೆಂಕಟರಮಣ ಸ್ವಾಮಿ ಸುಂದರ ರೂಪವೂ ಶಿಲ್ಪ ವೈಭವದಿಂದ ತುಂಬಿ ನಿಂತಿದೆ. ಸುಮಾರು 5 ಅಡಿ ಎತ್ತರ ಇರುವ ಮೂರ್ತಿಯ ಹಸ್ತದಲ್ಲಿ ಶಂಕ ಚಕ್ರ, ಅಭಯ ಕಟ್ಟಿ ಹಸ್ತಗಳು ಶೋಭಿಸುತ್ತವೆ. ಎಡ–ಬಲಗಳಲ್ಲಿ ಶ್ರೀದೇವಿಯರಿದ್ದು ಭಕ್ತರನ್ನು ಅನುಗ್ರಹಿಸುತ್ತಿದ್ದಾರೆ. ಚೈತ್ರ ಮಾಸದ ಚಿತ್ತ ನಕ್ಷತ್ರದ ದಿನ ವೈಭವದ ರಥೋತ್ಸವ ನಡೆಯುತ್ತದೆ. ಈ ಸಂದರ್ಭದಲ್ಲಿ ಹೂವಿನ ಪಲ್ಲಕ್ಕಿ ವಿಶೇಷ ಸಂಭ್ರಮ ಸಡಗರದಿಂದ ಕೂಡಿರುತ್ತದೆ.

**ಸೀತೆ**

ಸೀತೆ ಕೋಲಾರದಿಂದ 18 ಕಿಲೋಮೀಟರ್ ದೂರದಲ್ಲಿರುವ ಸೀತೆ ಭೈರವನ ಕ್ಷೇತ್ರ ಎಂದು ಪ್ರಸಿದ್ಧವಾಗಿದೆ. ಬೆಟ್ಟದ ಮೇಲೆ ಎರಡು ಪ್ರಮುಖ ದೇವಾಲಯಗಳಿದ್ದು ಒಂದು ಶ್ರೀ ಪತೇಶ್ವರ, ಮತ್ತೊಂದು ಭೈರವೇಶ್ವರ. ಇವುಗಳಲ್ಲಿ ಶ್ರೀಪತಿ ಲಿಂಗವನ್ನು ಹೊಂದಿರುವ ಗುಹೆವು ನೈಸರ್ಗಿಕವಾಗಿದೆ. ಇದನ್ನು ದೇವಾಲಯವನ್ನಾಗಿ ಮಾರ್ಪಡಿಸಿರುತ್ತಾರೆ ಶಾಕ್ತ ಆರಾಧನೆ ಕೇಂದ್ರವಾಗಿದ್ದ ಇಲ್ಲಿ ಸಂಸ್ಕೃತಿ ಬೆಳೆದಂತೆ ಗುಡಿಗಳು ನಿರ್ಮಾಣವಾಗಿವೆ. ಗರ್ಭಗೃಹದಲ್ಲಿ ಲಿಂಗವನ್ನು ಗಂಗರ ಕಾಲಕ್ಕೆ ಸೇರಿಸಬಹುದು. ಆದರೆ ಶ್ರೀಪತೇಶ್ವರ ಪೂಜಾರಿಗಳಿಗೆ ದಾನ ದತ್ತಿಗಳನ್ನು ನೀಡಿದವರು ಮಾತ್ರ ಚೋಳ ವಂಶಕ್ಕೆ ಸೇರಿರುತ್ತಾರೆ. ಚತುರ್ಭುಜವನ್ನು ಹೊಂದಿರುವ ಭೈರವವನ್ನು ಕೈಯಲ್ಲಿ ತ್ರಿಶೂಲ ಪಾಶ ಕಪಾಲ, ಅಕ್ಷಮಾಲೆ ಇವು ಗಂಭೀರವಾದ ಮುಖಮುದ್ರೆ ಅಂತವರನ್ನು ಭಕ್ತಿ ಭಾವೈಕ್ಯತೆಯನ್ನು ಮೂಡಿಸುತ್ತದೆ. ದೇವಮೂರ್ತಿಯ ಪ್ರಭಾವಳಿ ವಿಶಿಷ್ಟವಾಗಿದೆ. ಭೈರವನ ದೇವಾಲಯವನ್ನು ಹೆಸರಿಸುವ ಶಾಸನ ಶಿವಾಲಯದ ಗರ್ಭಗೃಹಕ್ಕೆ ಹೊಂದಿಕೊಂಡಿದೆ.

ತಮಿಳು ಗಂಗರ ಎಂಬ ರಾಜ ವಂಶರು ಕೋಲಾರ ಜಿಲ್ಲೆಯ ಅನೇಕ ಶಿವದೇವಾಲಯಗಳ ಅಭಿವೃದ್ಧಿಗೆ ಕಾರಣರಾದರು. ಇವರು ಬಲ್ಲವಾ ಚೋಳ ಹೊಯ್ಸಳ ಮಾಂಡಳಿಕರಾಗಿದ್ದರು. ನಂತರ ವಿಜಯನಗರ ಅರಸರು ದಾನಗಳನ್ನು ನೀಡಿದ್ದಾರೆ. ಯಲಹಂಕದ ನಾಡು ಪ್ರಭುಗಳ ಮನೆತನ ದೇವರು ಸೀತೆ ಭೈರವೇಶ್ವರ ಇಲ್ಲಿ ಹೊಯ್ಸಳರ ಕಲಾಕೃತಿಗಳನ್ನು ಅನುಸರಿಸುವಂತೆ ದೇವಾಲಯದ ಎರಡು ಭಾಗಗಳಿವೆ. ಗಣಪತಿ ವೀರಭದ್ರ ಮಹಿಷಮರ್ದನಿಯರನ್ನು ಒಂದು ಬದಿಯಲ್ಲಿ ನಿಲ್ಲಿಸಿರುತ್ತಾರೆ. ಶ್ರೀ ಪತೇಶ್ವರ ದೇವಾಲಯದ ಮತ್ತೊಂದು ಬದಿಯಲ್ಲಿ ಸುಬ್ರಹ್ಮಣ್ಯವನ್ನು ಮತ್ತು ಪಾರ್ವತಿದೇವಿ ಗುಡಿಗಳನ್ನು ಕಾಣಬಹುದು. ಹಾಗೆ ಸೀತೆ ಬೆಟ್ಟ ಬಂಡೆಗಳೆ ತುಂಬಿಕೊಂಡು ನಿಂತಿರುವ ವಿಶಾಲವಾದ ನಿಸರ್ಗ ಪ್ರದೇಶದಲ್ಲಿ ಕೋಟೆಯ ಪಳಿಯುಳಿಕೆಗಳನ್ನು ಕಾಣಬಹುದು. ಬೆಟ್ಟದ ಕೆಳಗಡೆ ವೇಣುಗೋಪಾಲ ಸ್ವಾಮಿ ಗ್ರಾಮ ದೇವತೆಯರ ಗುಡಿಗಳಿವೆ. ಸೀತೆಯು ಭೈರವರಿಗೆ ತಮ್ಮ ಕೈ ಬೆರಳುಗಳನ್ನು ಕಾಣಿಕೆಯಾಗಿ ಕೊಡುವ ಪದ್ಧತಿಯು ಒಂದು ಕಾಲದಲ್ಲಿ ಪ್ರಚಲಿತವಾಗಿತ್ತು, ಆದರೆ ಕ್ರಮೇಣ ಪದ್ಧತಿ ಹೋಗಿ ಇಂದು ತಮ್ಮ ಕೈ ಬೆರಳುಗಳಿಗೆ ಹೂವನ್ನು ಸುತ್ತಿಕೊಂಡು ಅದನ್ನೇ ಕಾಣಿಕೆಯಾಗಿ ನೀಡುತ್ತಾರೆ.

**ಅಂತರಗಂಗೆ**

ಅಂತರಗಂಗೆ ಕೋಲಾರ ನಗರದ ಪಶ್ಚಿಮದ ಕಡೆಗೆ ಸುಮಾರು 2 ಕಿಲೋಮೀಟರ್ ದೂರದಲ್ಲಿ ಅಂತರ್ ಗಂಗೆ ಇದೆ. ಉತ್ತರ ದಕ್ಷಿಣವಾಗಿ ಹರಡಿರುವ ಶತಶೃಂಗ ಪರ್ವತಗಳ ಸಾಲನ್ನು ಪ್ರಕೃತಿ ದೈವದತ್ತ

ಕೊಡುಗೆ ಎಂದು ಭಾವಿಸಿಕೊಳ್ಳಬಹುದು. ಈ ಬೆಟ್ಟಗಳ ತಪ್ಪಲಿನ ಮಧ್ಯಭಾಗದ ಶಿಖರದಲ್ಲಿ ಹಲವಾರು ಗ್ರಾಮಗಳನ್ನು, ಚೆಲುವಿನ ತಾಣಗಳನ್ನು, ದೇವ ಸನ್ನತಿಯನ್ನು ಕಾಣಲು ಅವಕಾಶವಿದೆ. ಇಲ್ಲಿನ ಅಂತರಗಂಗೆ ಪ್ರವಾಸಿಗರಿಗೆ ದೈವ ಸನ್ನಿಧಿಯಾಗಿದೆ. ಬಸವನ ಬಾಯಿಂದ ಹೊರಹೊಮ್ಮುವ ಜಲಧಾರೆಯನ್ನು ಇಲ್ಲಿ ಸವಿಯಬಹುದಾಗಿದೆ ಜೊತೆಗೆ ಕಾಶಿ ವಿಶ್ವೇಶ್ವರನ ದರ್ಶನದ ಭಾಗ್ಯವಾಗುತ್ತದೆ. ಎಲ್ಲೆರಿ ಹೋದಂತೆ ಸುತ್ತಮುತ್ತಲಿನ ಕಾಣುವ ಕೆರೆ ಹೊಲಗದ್ದೆಗಳು ಕಾಣಬಹುದು. ಅಂತರಗಂಗೆ ತಪ್ಪಲಿನಲ್ಲಿ ಇರುವುದು ಜಲಕಂಠೇಶ್ವರ ದೇವಾಲಯ ಇದನ್ನು ಸುಮಾರು ಒಂದು ದಶಕದ ಹಿಂದೆ ನವೀಕರಿಸಿರುತ್ತಾರೆ. 13ನೇ ಶತಮಾನದಲ್ಲಿ ರಚನೆಯಾದ ಈ ದೇವಾಲಯವು ಇಂದು ಕೆಲವೊಂದು ಮಾರ್ಪಾಡುಗಳನ್ನು ಹೊಂದಿ ಸುರಕ್ಷಿತವಾಗಿವೆ. ಅಂತರಗಂಗೆಯ ಕಾಶಿ ವಿಶ್ವೇಶ್ವರ ದೇವಾಲಯ, ಜಲಕಂಠೇಶ್ವರ ದೇವಾಲಯಗಳಲ್ಲಿ ಕಾರ್ತಿಕ ಮಾಸ ಮತ್ತು ಶಿವರಾತ್ರಿಗಳಂದು ವಿಶೇಷ ಪೂಜೆಗಳನ್ನು ಸಲ್ಲಿಸಲಾಗುತ್ತದೆ.

**ಕೋಲಾರಮ್ಮ ದೇವಾಲಯ**

ಕೋಲಾರಮ್ಮ ದೇವಾಲಯ ಗಂಗರ ರಾಜಧಾನಿಯಾಗಿದ್ದ ಕೋಲಾರ ಕಲೆ ಸಂಸ್ಕೃತಿಗಳ ಸಕಾರ ರೂಪ ಪಡೆದ ಸ್ಮಾರಕಗಳನ್ನು ಕಾಣಬಹುದು. ಇಲ್ಲಿರುವ ಕೋಲಾರಮ್ಮನ ದೇವಾಲಯವನ್ನು ಗಂಗರ ಶಿಲ್ಪಕಲೆಗೆ ಅತ್ಯುತ್ತಮ ಉದಾಹರಣೆಯಾಗಿದೆ. ಇದನ್ನು ಚೋಳರ ರಾಜೇಂದ್ರ ಚೋಳನ ಕಾಲದಲ್ಲಿ ಅಸ್ತಿಭಾರ ಹಾಕಿ ಲಂಬಕೋನಾಕೃತಿ ಶಿವ ಸ್ತೋತ್ರ ಶಿಲ್ಪವನ್ನು ಹೊಂದಿರುವ ಜೋಡಿ ಮಂದಿರಗಳಿಂದ ಕೂಡಿದ ಈ ಆಲಯಕ್ಕೆ ಒಂದೇ ಮುಖಮಂಟಪ ಇರುವುದು ಇದರ ವೈಶಿಷ್ಟವಾಗಿದೆ. ಕೋಲಾರಮ್ಮ ಊರಿನ ಗ್ರಾಮದೇವತೆ ಇದನ್ನು 'ಪೀಡಿಯಾರ್' ಎಂದು ಕರೆಯುತ್ತಾರೆ. ಜಾನಪದ ಗೀತೆಯನ್ನು ಸೋಲೂರಮ್ಮನೆಂದು ಆರಾಧಿಸುತ್ತಾರೆ. ಜಾನಪದ ಹಿನ್ನೆಲೆಯಿಂದ ಕೂಡಿದ ಈಕೆಯ ಮೂಲ ರೂಪವನ್ನು ಎತ್ತಿ ಬಂದಂತಿದೆ ನಮಗೆ ಅಸ್ಪಷ್ಟ. ಆದರೆ ಚೋಳ ರಾಜರ ಕಾಲದಲ್ಲಿ ಸಪ್ತ ಮಾತೃಕೆರ ಗುಂಪಿನಲ್ಲಿ ಪ್ರಧಾನ ದೇವತೆಯಾಗಿ ಆರಾಧಿಸಲ್ಪಡುವ ಈಕೆ ಇಂದು ಮಾತ್ರ ಚಾಮುಂಡೇಶ್ವರಿಯಾಗಿ ಕಂಡುಬರುತ್ತಿದ್ದಾಳೆ. ಉತ್ತರದ ಕಡೆ ಇರುವ ದೇವಮಂದಿರಗಳಲ್ಲಿ ಮುಖ ಮಾಡಿ ಕುಳಿತಿರುವ ಈಕೆಯನ್ನು ಶಕ್ತಿ ಸ್ವರೂಪನಾಗಿ ಆರಾಧಿಸಲಾಗುತ್ತದೆ. ದಕ್ಷಿಣದ ದೇವಮಂದಿರದಲ್ಲಿ ಅಪರೂಪದ ಸಪ್ತಮಾತೃಕೆ ಅಭಿಮುಖವಾಗಿ ನಾಚಿಯಾರಮ್ಮನ ದರ್ಶನವನ್ನು ಸಹ ಪಡೆಯಬಹುದಾಗಿದೆ. ಕೋಲಾರಮ್ಮನ ದೇವಾಲಯದ ಹೊರಗೋಡೆಯ ಮೇಲೆ ಸುಮಾರು 30 ಶಾಸನಗಳಿವೆ. ಇವುಗಳನ್ನು ಕನ್ನಡ, ತಮಿಳು ಭಾಷೆಗಳಲ್ಲಿ ರಚಿಸಲಾಗಿದೆ. ಚೋಳರ ರಾಜನಿಂದ ಮೊದಲುಗೊಂಡು ವಿಜಯನಗರದ ಅರಸನಾದ ಅಚ್ಯುತರಾಯನ ಕಾಲದವರೆಗಿನ ಶಾಸನಗಳು ನಿಂತಿವೆ. ಇದ್ದ ಸನ್ನಿವೇಶವನ್ನು ಚಿತ್ರಿಸುವ ಮುಖ್ಯವಾದ ವೀರಗಲ್ಲುಗಳನ್ನು ದೇವಾಲಯದ ವರಮಂಟಪದ ವೇದಿಕೆಯ ಮೇಲೆ ನಿಲ್ಲಿಸಿರುತ್ತಾರೆ. ದೇವಾಲಯದ ಮಹಾದ್ವಾರವು ಉನ್ನತವಾದ ಕಲಾ ಪ್ರೌಢಮೆಯಿಂದ ಕೂಡಿದ ಪರಶುರಾಮರ ತಪೋಭೂಮಿಯಾದ ಕೋಲಾರಮ್ಮನ ದೇವಾಲಯಕ್ಕೆ ಮಹತ್ವದ ಸ್ಥಾನವು ಲಭಿಸಿದೆ.

**ಬಂಗಾರ ತಿರುಪತಿ**

ಬಂಗಾರ ತಿರುಪತಿ ಬೇತಮಂಗಲದಿಂದ ಮುಳಬಾಗಿಲಿಗೆ ಹೋಗುವ ದಾರಿಯಲ್ಲಿರುವುದೇ ಬಂಗಾರ ತಿರುಪತಿ. ಗುಟ್ಟಹಳ್ಳಿ ಶ್ರೀನಿವಾಸನ ಸನ್ನಿಧಿಗೆ ಹೋಗಲು ಮೆಟ್ಟಿಲುಗಳನ್ನು ಕಟ್ಟಿರುತ್ತಾರೆ. ಆಕರ್ಷಕವಾದ

ಗಾಳಿಗೋಪುರದ ಮೂಲಕ ಸಾಗುವಾಗ ಆರಂಭದಲ್ಲಿ ಪುಷ್ಕರಿಣಿ ಇದ್ದು ನಮ್ಮ ಶುಚಿತ್ವಕ್ಕೆ ಆಸರೆಯಾಗುತ್ತದೆ. ಮೆಟ್ಟಿಲೇರಿ ಹೋದಂತೆ ಗರುಡ ಆಂಜನೇಯನ ದರ್ಶನವಾಗುತ್ತದೆ ವಿನಾಯಕ, ವರಹಸ್ವಾಮಿಗಳನ್ನು ದರ್ಶನವನ್ನು ಸಹ ಮೇಲೆ ಮಾಡಬಹುದು. ದೇವಾಲಯವನ್ನು ಹೊಂದಲು ಅಗತ್ಯವಾದಷ್ಟು ವಿಶಾಲವಾದ ಗುಡ್ಡದ ಮೇಲೆ ಪುಟ್ಟದಾದ ವೆಂಕಟರಮಣ ಮೂರ್ತಿಯನ್ನು ಹೊಂದಿರುವ ಆಲಯವಿದೆ. ಪದ್ಮಾವತಿ ದೇವಿಯು ಪಕ್ಕದಲ್ಲಿ ಇರುವ ಮತ್ತೊಂದು ಗುಡ್ಡದ ಮೇಲಿದೆ ನವಿಲು ತೀರ್ಥ. ಪಕ್ಷಿ ತೀರ್ಥ ಪಾಪನಾಶದಿಂದ ಹೆಸರಿನ ತಾಣಗಳನ್ನು ಕಂಡಾಗ ತಿರುಮಲೆಯ ನೆನಪಾಗುತ್ತದೆ. ಮಾಘ ಶುದ್ಧ ಹುಣ್ಣಿಮೆಯಂದು ವೆಂಕಟರಮಣಸ್ವಾಮಿಯ ಬ್ರಹ್ಮ ಮಹೋತ್ಸವ ನಡೆಯುವುದು. ಶ್ರಾವಣ ಮಾಸದಲ್ಲಿ ವಿಶೇಷವಾದ ಪೂಜೆ, ಉತ್ಸವಗಳನ್ನು ದೇವರಿಗೆ ನೆರವೇರಿಸುತ್ತಾರೆ.

**ವೀರಾಂಜನೇಯಸ್ವಾಮಿ ಮೂರ್ತಿ**

ಮುಳಬಾಗಿಲಿನ ವೀರಾಂಜನೇಯಸ್ವಾಮಿ ಮೂರ್ತಿ ಎತ್ತರವಾದ ನಿಲುವಿನಲ್ಲಿ ಗಂಭೀರ ಉದಾತ್ತ ಸ್ವಭಾವಗಳು ತುಂಬಿಕೊಂಡಿವೆ. ಪ್ರಾಣ ದೇವರ ಸನ್ನಿಧಿಗೆ ಮೆಟ್ಟಿಲೇರಿ ಹೋಗಬೇಕು ಕೆಳಭಾಗದಲ್ಲಿ ರಾಮಚಂದ್ರ ದೇವರ ಸನ್ನಿಧಾನವಿದೆ. ಇಲ್ಲಿರುವ ನರಸಿಂಹ ದೇವರ ವಿಗ್ರಹವು ಸಹ ಸುಂದರವಾಗಿದೆ. ಹಾಗೆಯೇ ಪಕ್ಕದಲ್ಲಿ ರಂಗನಾಥಸ್ವಾಮಿ ಸನ್ನಿಧಿಯಿದೆ. ಇದು ತಿರುಪತಿಯ ಗೋವಿಂದರಾಜರನ್ನು ಪಡಿಸಿರುವ ಮೂರ್ತಿಯು ಭಕ್ತರ ಸ್ಮರಣೆಗೆ ಬರುತ್ತದೆ. ಮುಂಭಾಗದಲ್ಲಿ ಎತ್ತರವಾದ ಗೋಪುರ, ವಿಜಯನಗರದ ನಂತರದ ರಚನೆ ಆಗಿರಬಹುದು. ಚಂದ್ರಗಿರಿಯ ಅರಸನೊಂದಿಗಿನ ಸಂಬಂಧ ಮತ್ತು ಕೃಷ್ಣದೇವರಾಯನ ಹೀನ ದೈವ ಭಕ್ತಿಗಳ ಕಾರಣದಿಂದ ಮುಳಬಾಗಿಲಿನಲ್ಲಿ ತಿರುಪತಿ, ತಿರುಮಲಗಳ ಪ್ರತಿಸ್ವರೂಪವನ್ನು ಆಂಜನೇಯ ದೇವಾಲಯ ಮತ್ತು ಅದರ ದೇವಾಲಯಗಳ ಸಂಕೀರ್ಣಗಳಲ್ಲಿ ಕಾಣಬಹುದು.

**ಸೋಮೇಶ್ವರ ದೇವಾಲಯ**

ಮುಳಬಾಗಿಲಿನ ಸೋಮೇಶ್ವರ ದೇವಾಲಯ ದ್ರಾವಿಡ ಶೈಲಿಯಲ್ಲಿ ನಿರ್ಮಾಣವಾಗಿರುವುದು ಮಹತ್ವ ಪೂರ್ಣವಾದುದು. ತಮಿಳುನಾಡಿನ ದೇವಾಲಯಗಳ ನೆನಪು ಈ ದೇವಾಲಯದ ನಿರ್ಮಾಣವಾಗಿದೆ. ಯಳವಂಜಿ ನಾಡಿಗೆ ಸಂಬಂಧಿಸಿದ ಪ್ರತಿಷ್ಠಿತ ವ್ಯಕ್ತಿಗಳ ಮನೋಗತಕ್ಕ ಅನುಗುಣವಾಗಿ ಉದಯವಾದಂತೆ ಇರಬಹುದು. ಇದು 13ನೇ ಶತಮಾನದಿಂದ 15ನೇ ಶತಮಾನದವರಿಗೆ ಹಂತ ಹಂತವಾಗಿ ನಿರ್ಮಾಣಗೊಂಡಿರುವ ದೇವಾಲಯ. ಇಲ್ಲಿ ವಿಶೇಷವಾಗಿರುವ ನಟರಾಜನ ವಿಗ್ರಹ ಕಂಡುಬರುತ್ತದೆ ಹಾಗೂ ದೇವಾಲಯದ ಶಿವಲಿಂಗವು ಸ್ವಯಂಭುವಲಿಂಗವೆಂದು ಕರೆಯಲಾಗಿದೆ.

**ಶ್ರೀಪಾದರಾಜರ ಬೃಂದಾವನ**

ಶ್ರೀಪಾದರಾಜರ ಬೃಂದಾವನ ಮುಳಬಾಗಿಲಿನ ಮೂಡಣದ ದಿಕ್ಕಿನಲ್ಲಿದೆ. ಯತಿ ಒರಿಯನ್ನ ಈ ಸನ್ನಿಧಾನದಲ್ಲಿ ಯೋಗಿಗಳ ನೆಲವಿದೆ. ಇಲ್ಲಿರುವ ಯೋಗನರಸಿಂಹ ದೇವರ ಪೂಜಾ ದಿನಗಳು ಪ್ರತಿನಿತ್ಯ ಸಾಂಗವಾಗಿ ನೆರವೇರುತ್ತದೆ. ಶ್ರೀಪಾದರಾಜರ ಶಿಷ್ಯರಾದ ವ್ಯಾಸರು ಈ ಸ್ಥಳದಲ್ಲಿಯೇ ವ್ಯಾಸಂಗ ನಡೆಸಿ ನಂತರ ಸೋಸಲೆಗೆ ತೆರಳಿದ್ದಾರೆ. ವೈದಿಕ ಸಂಸ್ಕೃತಿಯನ್ನು ಕನ್ನಡದ ಕೀರ್ತನೆಗಳ ಮೂಲಕ ಜನಪ್ರಿಯಗೊಳಿಸಲು ಶ್ರಮಿಸಿದ ಈ ದಾಸ ಶ್ರೇಷ್ಠರಿಗೆ ಸಾಹಿತ್ಯ ಧರ್ಮಗಳಲ್ಲಿ ಜನಪ್ರಿಯವಾದ ಸ್ಥಾನವಿದೆ.

ಇಂತಹ ಮಹನೀಯರನ್ನು ಕೊಡುಗೆಯಾಗಿ ನೀಡಿದ ಮುಳಬಾಗಿಲು ಮತ್ತು ಅದರ ಇತಿಹಾಸಗಳು ಆಸಕ್ತರಲ್ಲಿ ಶ್ರೀಪಾದರಾಜ ಕ್ಷೇತ್ರ ಎಂದು ಕರೆಯುತ್ತಾರೆ. ವಿದ್ಯಾರಣ್ಯ ಮತ್ತು ವಿದ್ಯಾಶಂಕರರ ಇತಿಹಾಸವು ಕಂಡುಬರುತ್ತದೆ ಹಾಗೂ ಮುಳುಬಾಗಿಲು ತಾಲೂಕಿನ ಹುತ್ತನೂರು ಉತ್ತಮವಾದ ಕಂಚಿಪುರದ ವರದರಾಜಸ್ವಾಮಿಯ ನೊಳಂಬರ ಕಾಲದಿಂದಲೂ ಪ್ರಖ್ಯಾತಿಯಾಗಿದೆ. ಹಾಗೆ ಬೈರಕೂರಿನ ಕೋದಂಡ ರಾಮಸ್ವಾಮಿ, ಪ್ರತಾಪರುದ್ರ ದೇವರಾಯನ ಗುರುಪಳ್ಳಿಯಲ್ಲಿ ಕೆಲವು ಪುರಾತನವಾದ ದೇವಾಲಯಗಳಿವೆ. ಕೋಲಾರದ ಮಕ್‌ಬರ ಕೋಲಾನಗರದಲ್ಲಿ ಗಡಿಯಾರ ಗೋಪುರದ ಬಳಿ ಇರುವ ಮಕ್ಬಾನ ಎಂಬ ಸ್ಥಳ ಮುಸಲ್ಮಾನರಿಗೆ ಪವಿತ್ರ ಕ್ಷೇತ್ರವಾಗಿದೆ. ಈ ಸ್ಥಳದಲ್ಲಿ ಸಂಬಂಧಿಕರ ಗೋರಿಗಳನ್ನು ಸ್ಥಾಪಿಸಿದ್ದಾರೆ. ಕೋಲಾರ ಜಿಲ್ಲೆಗೆ ಹೈದರಾಲಿ ವಂಶಸ್ಥರ ಗಾಢವಾದ ಸಂಬಂಧಕ್ಕೆ ಜಾಗವು ನಿದರ್ಶನ, ಪುರಾವೆಗಳು ನೀಡುತ್ತವೆ. ಇಲ್ಲಿರುವ 12 ಸಮಾಧಿಗಳಲ್ಲಿ ಮೂರನ್ನು ಪ್ರಧಾನವಾಗಿ ಪರಿಗಣಿಸುತ್ತಾರೆ. ಹೈದರನ ತಂದೆ ತಾಯಿ ಮಲತಾಯಿಯವರ ಪ್ರಸಿದ್ಧವಾದ ಗೋರಿಗಳಿವೆ. ಇಲ್ಲಿ ನಡೆಯುವ ಉರಸ್ ಯಾಕಾವಲಿ ರಾತ್ರಿಯಿಡಿ ಅದ್ದೂರಿಯಾದ ಕಾರ್ಯಕ್ರಮಗಳು ನಡೆಯುತ್ತವೆ. ಕೋಲಾರ ನಗರದಲ್ಲಿ ಸೋಮೇಶ್ವರ ದೇವಾಲಯವಿದ್ದು ಅದು ದ್ರಾವಿಡ ಶೈಲಿಯ ವಿಜಯನಗರ ಪೂರ್ವ ಅಥವಾ ಚೋಳರ ಕಾಲದ ಉತ್ತಮ ಪ್ರತೀಕವಾಗಿದೆ. ಎತ್ತರವಾದ ಪ್ರವೇಶ ದ್ವಾರದಲ್ಲಿರುವ ಗಾರೆ ಇಟ್ಟಿಗೆಗಳಿಂದ ನಿರ್ಮಿತವಾಗಿರುವ ರಾಯಗೋಪುರವಿದೆ. ಗರ್ಭಗೃಹ ವಿಶಾಲವಾದ ಅರ್ಧಮಂಟಪ, ನವರಂಗ ಗಳನ್ನು ಹೊಂದಿದೆ. ಮುಂಭಾಗದ ನವರಂಗದಲ್ಲಿ ನಾಲ್ಕು ಕೇಂದ್ರ ಸ್ಥಂಭಗಳು ಚೌಕಾಕಾರವಾಗಿದೆ. ಮೇಲ್ಭಾಗದಲ್ಲಿ ವೀರಭದ್ರ ಋಷಿಗಳು, ಮಾರ್ಕಂಡಯ್ಯ, ವಿವಿಧ ಅವತಾರಗಳ ಶಿವನು, ಕೋದಂಡರಾಮ, ನಾಟ್ಯ ಗಣಪತಿ, ಸೂರ್ಯನಾರಾಯಣ ಮುಂತಾದ ಆಕರ್ಷಕ ಉಬ್ಬು ಶಿಲ್ಪಗಳನ್ನು ಒಳಗೊಂಡಿದೆ. ಅಲ್ಲದೆ ನವರಂಗದಲ್ಲಿ ಗಣೇಶ, ವೀರಭದ್ರ, ಶೈವ ದ್ವಾರಪಾಲಕರು, ನಾಗ ಮತ್ತು ನವಿಲಿನ ಮೇಲೆ ಕುಳಿತ ಷಣ್ಮುಖರ ಸುಂದರ ಶಿಲ್ಪಗಳನ್ನ ಇಡಲಾಗಿದೆ. ಅರ್ಧಮಂಟಪದ ಭಾಗದಲ್ಲಿರುವ ಏಕಶಿಲಾ ನಂದಿ ವಿಜಯನಗರ ಲಕ್ಷಣಗಳನ್ನು ವ್ಯಕ್ತಪಡಿಸುತ್ತದೆ. ಹಾಗೆಯೇ ಮಹದ್ವಾರವೂ, ಇದರ ಪಕ್ಕದಲ್ಲಿ ಕಲ್ಯಾಣ ಮಂಟಪ, ವಸಂತೋತ್ಸವ ಮಂಟಪ ಸುಂದರವಾದ ವಾಸ್ತುಶಿಲ್ಪ ರಚನೆಯಾಗಿದೆ. ದೇವಾಲಯದ ಎದುರು ಭಾಗದಲ್ಲಿ ನಾಗರಕುಂಟೆ ಎಂಬ ಪ್ರಾಚೀನ ಪುಷ್ಕರಿಣಿ ಇದೆ.

**ಕೋಟಿ ಲಿಂಗ**

ಕೋಟಿ ಲಿಂಗ ಬಂಗಾರಪೇಟೆಯಿಂದ 14 ಕಿಲೋಮೀಟರ್ ದೂರದಲ್ಲಿರುವ ಕೋಟಿಲಿಂಗ ಕ್ಷೇತ್ರ ಎಂದು ಜನಪ್ರಿಯವಾಗಿದೆ. ಇದು ಕಮ್ಮಸಂದ್ರದ ಸಾಂಭವ ಮೂರ್ತಿಸ್ವಾಮಿಗಳ ಮಾರ್ಗದರ್ಶನದಲ್ಲಿ ಕೋಟಿಲಿಂಗೇಶ್ವರ ಸಮುಚ್ಚಯ ಸ್ಥಾಪನೆಯಾಗಿದೆ. ಇಲ್ಲಿಗೆ ಕರ್ನಾಟಕದ ವಿವಿಧ ಭಾಗಗಳಿಂದ, ತಮಿಳುನಾಡು, ಆಂಧ್ರಪ್ರದೇಶಗಳಿಂದ ಭಕ್ತರನ್ನು ಆಕರ್ಷಿಸುತ್ತಿದೆ. ಮಂಜುನಾಥ, ಬ್ರಹ್ಮ ವಿಷ್ಣು, ಮಹೇಶ್ವರ, ಕೋಟಿಲಿಂಗ ಮತ್ತು ನವಗ್ರಹಗಳು ವಿಶಾಲವಾದ ಪ್ರಕಾರಗಳಲ್ಲಿ ಹೊಂದಿರುವ ಕೋಟಿಲಿಂಗೇಶ್ವರ ಸಾವಿರಾರು ಲಿಂಗಗಳು ಕಂಡುಬರುತ್ತದೆ. ಮಂಜುನಾಥಸ್ವಾಮಿ ದೇವಾಲಯದ ಅರ್ಧಮಂಟಪದಲ್ಲಿ ನೀಡಲಾಗಿದೆ. ನವರಂಗದ ಸ್ತಂಭಗಳು, ಉಬ್ಬು ಅಲಂಕೃತವಾಗಿವೆ. ಸಾಲು ಸಾಲು ಲಿಂಗಗಳು ಸಿದ್ದೇಶ್ವರಸ್ವಾಮಿ 12 ಅಡಿ ಎತ್ತರದ್ದು. 108 ಅಡಿ ಶಿವಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಇಲ್ಲಿ ಸದಾ ಸಾಮೂಹಿಕ ವಿವಾಹಗಳು

ಜರುಗುತ್ತಿರುತ್ತವೆ. 12 ಅಡಿ ಎತ್ತರದ ವೃಷಭೇಶ್ವರ ಸ್ವಾಮಿ ಅದರ ಎದುರುಗಡೆ 108 ಆಡಿ ಎತ್ತರದ ಶಿವಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ.

**ಉಪಸಂಹಾರ**

ಕೋಲಾರ ಜಿಲ್ಲೆ ಧಾರ್ಮಿಕ ಮತ್ತು ಸಾಂಸ್ಕೃತಿಕವಾಗಿ ತನ್ನದೇ ಆದ ಮಹತ್ವವನ್ನು ಪಡೆದುಕೊಂಡಿದೆ. ಹಬ್ಬ–ಹರಿದಿನಗಳು, ಜಾತ್ರೆ–ಉತ್ಸವಗಳು ಒಂದು ಜನ ಸಮುದಾಯದ ಸಾಂಸ್ಕೃತಿಕ ಪರಂಪರೆ ಸಂಕೇತಗಳು. ಅನಾದಿಕಾಲದಿಂದಲೂ ರೂಢಿಸಿಕೊಂಡು ಬಂದಿರುವ ಜನಪದ ಕಲೆ ಹಾಗೂ ಸಾಂಸ್ಕೃತಿಕ ಉತ್ಸವಗಳನ್ನು ಅತ್ಯಂತ ಶ್ರದ್ಧೆ ಮತ್ತು ವೈಭವದಿಂದ ಆಚರಿಸಿಕೊಂಡು ಬಂದಿರುವುದು ಹೆಮ್ಮೆಯ ಸಂಗತಿ. ಅನ್ಯ ಭಾಷೆಗಳ ನಡುವೆ ಕನ್ನಡ ಭಾಷೆಯನ್ನು ಎತ್ತಿ ಹಿಡಿಯುವ ವೈವಿಧ್ಯಮಯ ಕಲೆ, ಸಾಹಿತ್ಯ, ಸಂಗೀತ ಜನಪದ ಕಲಾಸಿರಿಯನ್ನು ಮೈಗೂಡಿಸಿಕೊಂಡು ಬಂದಿದೆ. ಗ್ರಾಮೀಣ ಸಾಂಸ್ಕೃತಿಕ ಸಿರಿ ನೆರಳಿನಲ್ಲಿ ತಮಟೆವಾದನ ತುಡುಗು, ಪಂಡರಿ ಭಜನೆ, ವೇಣು ನೃತ್ಯ, ಗಾರುಡಿ ಗೊಂಬೆಗಳ ನರ್ತನ, ಕಳಸ ನೃತ್ಯ, ತೊಗಲುಗೊಂಬೆ, ಕೇಳಿಕೆಗಳು, ಬಯಲಾಟ ಹಾಗೂ ಕರಗದ ಮೆರವಣಿಗೆಗಳು, ಜನಪದ ಉತ್ಸವಗಳ ತವರೂರಾಗಿದೆ. ಹಲವು ರಾಜರ ಆಳ್ವಿಕೆಯ ಕಾಲದಲ್ಲಿ ಕಟ್ಟಿರುವ ಕೋಟೆ–ಕೊತ್ತಲಗಳು, ಗುಡಿ–ಗೋಪುರಗಳು, ಕೆರೆ–ಕುಂಟೆಗಳು ಜಿಲ್ಲೆಯನ್ನು ಐತಿಹಾಸಿಕವಾಗಿ ಶ್ರೀಮಂತಗೊಳಿಸಿವೆ. ಕೋಲಾರ ಜಿಲ್ಲೆಯಲ್ಲಿರುವ ಕುರುಡುಮಲೆ ಸೋಮೇಶ್ವರ ದೇವಾಲಯಗಳು, ಆವಣಿ ವಿರೂಪಾಕ್ಷ ದೇವಾಲಯಗಳು, ಬಂಗಾರ ತಿರುಪತಿ, ಚಿಕ್ಕ ತಿರುಪತಿ ಕೋಟಿಲಿಂಗ, ಕೋಲಾರದ ನಗರ ಭಾಗದಲ್ಲಿರುವ ದೇವಾಲಯಗಳು, ಮಸೀದಿಗಳು, ಚರ್ಚ್‌ಗಳು, ದರ್ಗಾಗಳು ಸಾಂಸ್ಕೃತಿಕವಾಗಿ, ಧಾರ್ಮಿಕವಾಗಿ ಜನರನ್ನು ಆಕರ್ಷಿಸುವ ಸ್ಥಳಗಳಾಗಿವೆ.

**ಪರಾಮರ್ಶನ ಗ್ರಂಥಗಳು**


- ಚಿತ್ರಂಜನ್ (ಸಂ.). (2005). ಕನ್ನಡ–ಕೋಲಾರ ಜಿಲ್ಲಾ ಗ್ಯಾಜೆಟಿಯರ್. ಕರ್ನಾಟಕ ಗ್ಯಾಸೆಟಿಯರ್ ಇಲಾಖೆ.
- ದೇವರಾಜಯ್ಯ. (1999). ಸಿರಿನಂದಿ. ಸ್ಮರಣ ಸಂಚಿಕೆ, ಕೋಲಾರ ಜಿಲ್ಲಾ ನಂದಿ ಉತ್ಸವ, ಕೋಲಾರ.
- ಮು.ವೆಂಕಟ ಕೃಷ್ಣಪ್ಪ. ಕೋಲಾರ ನಾಡು ಕಥೆಗಳು, ಕೋಲಾರ.
- ಮುನಿರಾಜು ಎಂ(ಸಂ). (2020). ಕರ್ನಾಟಕ ಗ್ರಾಮೀಣ ಚರಿತ್ರೆ ಕೋಶ ಕೋಲಾರ ಜಿಲ್ಲಾ ಸಂಪುಟ–1 ಮತ್ತು 2, ಕೋಲಾರ.
- ಮುನಿರಾಜು ಎಂ. ಮತ್ತು ಕೆ.ಸಿ. ರಾಧಮ್ಮ (2019). ಭಾರತದ ಸಾಂಸ್ಕೃತಿಕ ಸ್ಥಿತ್ಯಂತರಗಳು.
- ಗೋವಿಂದ ರೆಡ್ಡಿ. ಸಿ ಎಮ್. (2013). ಊರು ತೇರು. ಕೋಲಾರ ಜಿಲ್ಲಾ ಜಾತ್ರೆಗಳ ಅಧ್ಯಯನ, ಶಕ್ತಿ ಪ್ರಕಾಶನ, ಕೋಲಾರ.